39) ಶ್ರೀ ಕೆ.ಎಸ್. ಮಹಮದ್ ಮಸೂದ್
40) ಶ್ರೀ ಕೆ.ಬಿ. ಮಲ್ಲಿಕಾರ್ಜುನ
41) ಶ್ರೀ ಎನ್.ಪಿ. ಕೃಷ್ಣಮೂರ್ತಿ
42) ಶ್ರೀ ಟಿ.ಹೆಚ್. ನಾರಾಯಣ ಸ್ವಾಮಿ
43) ಶ್ರೀ ಜೆ.ಬಿ. ಶಿವಕುಮಾರ್
44) ಶ್ರೀ ಟಿ.ಎ. ರಂಗಯ್ಯ
45) ಶ್ರೀ ಪಿ. ವೆಂಕಟಗಿರಿಯಪ್ಪ
46) ಶ್ರೀ ವಿ.ಹೆಚ್. ಗೌಡ
47) ಶ್ರೀ ಸಿ.ಕೆ. ಕಾಳಪ್ಪ
48) ಶ್ರೀ ಅನಂತನಾಗ್
49) ಶ್ರೀ ವಿದ್ಯಾದಾರ್ ಗುರೂಜಿ
50) ಶ್ರೀ ಸಿದ್ದಲಿಂಗಯ್ಯ
ಖಗ) ಶ್ರೀ ವಿ. ಆರ್ ಸುದರ್ಶನ್
52) ಶ್ರೀ ಕಣಗಲಿ ಓಂ ಪ್ರಕಾಶ್ ಶಂಕರಾನಂದ
53) ಡಾ: ಪ್ರೇಮ್‌ಚಂದ್ ಸಾಗರ್
54) ಶ್ರೀಮತಿ ಬಿಂಬಾ ರಾಯ್‌ಕರ್
55) ಶ್ರೀಮತಿ ಮುಕ್ತಾರುನೀಸಾ ಬೇಗಂ
56) ಶ್ರೀ ಮೊಹಿನುದ್ದೀನ್
57) ಶ್ರೀ ವೀರಯ್ಯ ಸ್ವಾಮಿ
58) ಶ್ರೀ ಬಸವರಾಜ್ ಪಾಟೀಲ್ ಸೇಡಂ
59) ಶ್ರೀ ಎಸ್. ಮಲ್ಲಿಕಾರ್ಜುನಯ್ಯ
60) ಶ್ರೀ ಹೆಚ್.ಕೆ. ಪಾಟೀಲ್
61) ಶ್ರೀ ಸಯ್ಯದ್ ಷಾಹ್ ಅಹಮದ್ ಹುಸೇನಿ
62) ಡಾ: ಎಂ. ಸಿ. ಮೋದಿ
63) ಡಾ: ಗಂಗೂ ಬಾಯಿ ಹಾನ್‌ಗಲ್

ಅನುಬಂಧ - 7

ಪತ್ರಿಕೆಗಳಲ್ಲಿ ಪ್ರಕಟಿಸಿದ ನಂತರ ಆಸ್ತಿಯ ವಿವರಗಳನ್ನು ನೀಡಿದ ಸಚಿವರುಗಳ ಮತ್ತು ವಿಧಾನ ಸಭಾ ಸದಸ್ಯರುಗಳ ಪಟ್ಟಿ

1) ಶ್ರೀ ಬಿ. ಶಿವಣ್ಣ,
ಸಮಾಜ ಕಲ್ಯಾಣ ಸಚಿವರು.
2) ಶ್ರೀ ಎಂ.ಎಲ್. ಉಸ್ತಾದ್,
ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು.
3) ಶ್ರೀ ಕೆ.ಎಂ. ಸೋಮಸುಂದರಂ,
ವಿಧಾನ ಸಭಾ ಸದಸ್ಯರು, ಕೆ.ಆರ್. ಪುರಂ.
4. ಶ್ರೀ ಸಿ. ವೀರಭದ್ರಯ್ಯ
ವಿಧಾನ ಸಭಾ ಸದಸ್ಯರು, ತುಮಕೂರು.

ಉತ್ತರ ಕರ್ನಾಟಕದಲ್ಲಿ ಜೈಲು ಬಂದೀಖಾನೆ

403 (624) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):- ಮಾನ್ಯ ಬಂದೀಖಾನೆ ಮತ್ತು ಗೃಹ ರಕ್ಷಕ ದಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಂಬೈ ಕರ್ನಾಟಕ ಒಂದು ಸ್ಥಳದಲ್ಲಿ ಬಯಲು ಬಂಧೀಖಾನೆ ಸ್ಥಾಪಿಸುವ ವಿಚಾರ ಸರ್ಕಾರದ ಮುಂದೆ ಇರುವುದೇ?

ಆ) ಹಾಗಿದ್ದಲ್ಲಿ ಈ ಬಯಲು ಬಂಧೀಖಾನೆ ಸ್ಥಾಪಿಸಲು ಎಲ್ಲಾ ಅವಕಾಶಗಳನ್ನು ಹೊಂದಿದ್ದು ಅಲ್ಲಿ ಬಯಲು ಬಂಧೀಖಾನೆ ಸ್ಥಾಪಿಸಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು?

ಇ) ಬೆಳಗಾವಿ ಜಿಲ್ಲೆಯಲ್ಲಿ ಬಯಲು ಬಂಧೀಖಾನೆ ಸ್ಥಾಪಿಸಲು ಎಲ್ಲಾ ಅವಕಾಶಗಳನ್ನು ಹೊಂದಿದ್ದು ಅಲ್ಲಿ ಬಯಲು ಬಂಧೀಖಾನೆ ಸ್ಥಾಪಿಸಲು ಸರ್ಕಾರದವರು ಯಾವ ಕ್ರಮ ಕೈಗೊಳ್ಳುವರು?

ಈ) ಬೇರೆ ಬೇರೆ ರಾಜ್ಯಗಳಲ್ಲಿ ಬಯಲು ಬಂಧೀಖಾನೆ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಬಯಲು ಬಂಧೀಖಾನೆ ಸ್ಥಾಪಿಸುವುದರಿಂದ ಖೈದಿಗಳಿಗೆ ಮಾನಸಿಕ ಹಾಗೂ ಶಾರೀರಿಕ ಸ್ಥಿತಿ ಉತ್ತಮಗೊಳ್ಳುವುದಲ್ಲದೆ ಹಾಗೂ ಅವರ ಉದ್ಯೋಗ ಮಾಡುವುದರಿಂದ ಅವರ ಆರ್ಥಿಕ ಸ್ಥಿತಿ ಉತ್ತಮಗೊಳ್ಳುವುದಿಲ್ಲವೇ?

ಶ್ರೀ ಡಿ.ಕೆ. ಶಿವಕುಮಾರ್ (ಬಂಧೀಖಾನೆ ಮತ್ತು ಗೃಹ ರಕ್ಷಕ ದಳ ರಾಜ್ಯ ಸಚಿವರು)

ಎ) ಇಲ್ಲಾ.

ಬಿ) ಪ್ರಶ್ನೆ ಉದ್ಭವಿಸುವುದಿಲ್ಲಾ.

ಸಿ) ಅವಶ್ಯಕತೆ ಕಂಡು ಬರದೇಇರುವುದರಿಂದ ಸದ್ಯಕ್ಕೆ ಪ್ರಸ್ತಾವನೆ ರೂಪುಗೊಂಡಿಲ್ಲ.

ಡಿ) ಬಂದಿದೆ.

ಇ) ಹೌದು.

ಅದಕ್ಕಾಗಿ ಬೆಂಗಳೂರಿನಲ್ಲಿ ದೇವನಹಳ್ಳಿ ಬಳಿ ಬಯಲು ಬಂಧೀಖಾನೆ ಸ್ಥಾಪಿಸಲಾಗಿದೆ.

ಕೊರಟಗೆರೆ ಟೌನ್‌ಗೆ ಪೋಲೀಸ್ ಔಟ್ ಪೋಸ್ಟ್ ಮಂಜೂರಾತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 404(540) ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ):-ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಎ) ಕೊರಟಗೆರೆ ಟೌನ್‌ನಲ್ಲಿ ಒಂದೇ ಒಂದು ಪೋಲೀಸ್ ಸ್ಟೇಷನ್ ಇದ್ದು ನಾಲ್ಕು ಹೋಬಳಿಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಬಿ) ಕೊರಟಗೆರೆ ತಾಲ್ಲೂಕು ಕೋಳಾಲ ಗ್ರಾಮದಲ್ಲಿ ಪೋಲೀಸ್ ಸಬ್ ಸ್ಟೇಷನ್ ಮಂಜೂರು ಮಾಡಲು ಸರ್ಕಾರವು ಕ್ರಮ ತೆಗೆದುಕೊಂಡಿದೆಯೇ?

ಸಿ) ಹಾಗಿದ್ದಲ್ಲಿ, ಈ ಗ್ರಾಮದಲ್ಲಿ ಪೋಲೀಸ್ ಸಬ್ ಸ್ಟೇಷನ್ ತೆರೆಯಲು ಎಷ್ಟು ಅವಧಿ ಬೇಕಾಗಬಹುದು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು):-

ಎ) ಇಲ್ಲ

ಬಿ) ಇಲ್ಲ

ಸಿ) ಉದ್ಭವಿಸುವುದಿಲ್ಲ.

ಸಣ್ಣ ಉಳಿತಾಯ ಕ್ಯಾಲೆಂಡರ್‌ಗಳ ಬಗ್ಗೆ

405 (549) ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವ ಕಲ್ಯಾಣ) ಮಾನ್ಯ ಸಣ್ಣ ಉಳಿತಾಯ, ರಾಜ್ಯ ಲಾಟರಿ ಹಾಗೂ ವಿಮಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಎ) 1992ನೇ ಜನವರಿ ತಿಂಗಳಲ್ಲಿ ವಿತರಿಸಿದ ಸಣ್ಣ ಉಳಿತಾಯದ ವಾಲ್ ಕ್ಯಾಲೆಂಡರುಗಳು ಮತ್ತು ಪ್ಯಾಕೆಟ್ ಕ್ಯಾಲೆಂಡರುಗಳ ಸಂಖ್ಯೆ ಎಷ್ಟು?

ಬಿ) ಇದಕ್ಕೆ ತಗಲಿದ ಖರ್ಚಿಷ್ಟು, ಪ್ರತಿ, ಪ್ರತಿಗಳಿಗೆ ತಗಲಿದ ಖರ್ಚಿಷ್ಟು?

ಸಿ) ಈ ಕ್ಯಾಲೆಂಡರುಗಳನ್ನು ಎಲ್ಲಿ ಮುದ್ರಿಸಲಾಯಿತು?

ಶ್ರೀ ಟಿ.ಎಂ. ಮಂಜುನಾಥ್ (ಸಣ್ಣ ಉಳಿತಾಯ, ರಾಜ್ಯ ಲಾಟರಿ ಹಾಗೂ ವಿಮಾ ರಾಜ್ಯ ಮಂತ್ರಿಗಳು):-

ಎ) ಪ್ಯಾಕೆಟ್ ಕ್ಯಾಲೆಂಡರುಗಳು 3.25 ಲಕ್ಷಗಳು